**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 5/2023** **ಅಸಾ.1**

**ಚಾಸಾ.1**

| | | |
|---|---|---|
| ಸಾಕ್ಷಿದಾರರ ಹೆಸರು | - | ಶೈಲಜಾ |
| ಗಂಡನ ಹೆಸರು | - | ರವೀಂದ್ರ ಕರ್ಕೇರಾ |
| ವಯಸ್ಸು | - | 43 ವರ್ಷ |
| ಉದ್ಯೋಗ | - | ಬೀಡಿ ಕಟ್ಟುವುದು |
| ವಿಳಾಸ | - | ಕುಕ್ಕೆಹಳ್ಳಿ ಗ್ರಾಮ, ಉಡುಪಿ ತಾಲೂಕು. |

ದಿನಾಂಕಃ 17-11-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ :**

1. ಚಾಸಾ2 ನನ್ನ ಅಕ್ಕ. ಚಾಸಾ3 ನನ್ನ ಬಾವ. ಚಾಸಾ9 ನನ್ನ ಅಕ್ಕನ ಮಗ. ಮೃತ ಕೃತಿಕ್ ನನ್ನ ಅಣ್ಣನ ಮಗ. ಲಕ್ಷ್ಮೀ ಬಂಗೇರಾ ನನ್ನ ಸೋದರ ಮಾವನ ಹೆಂಡತಿ. ಆರೋಪಿಯು ನನ್ನ ಸೋದರ ಮಾವನ ಮೊಮ್ಮಗಳ ಗಂಡ. ಆರೋಪಿ ದಿನೇಶ ಸಪಲಿಗ ನಮ್ಮ ಮನೆಯ ಪಕ್ಕದಲ್ಲಿ ಇರುವ ಮನೆಯಲ್ಲಿ ವಾಸ ಮಾಡುತ್ತಾರೆ. ನನ್ನ ಅಣ್ಣ ಜಗನ್ನಾಥ್ ಸಾಲ್ಯಾನ್ ಈ ಹಿಂದೆ ಮುಂಬೈನಲ್ಲಿ ಕೆಲಸ ಮಾಡಿಕೊಂಡಿದ್ದರು. ಕಳೆದ 21 ವರ್ಷಗಳಿಂದ ಅವರು ಊರಿಗೆ ಬಂದು ನಮ್ಮೊಂದಿಗೆ ವಾಸ ಮಾಡುತ್ತಿದ್ದರು. ಮೃತ ಕೃತಿಕ್ ನ ತಾಯಿ ಈ ಹಿಂದೆಯೇ ಮೃತ ಪಟ್ಟಿರುತ್ತಾರೆ. ತದನಂತರ ನನ್ನ ಅಣ್ಣ ಇನ್ನೊಂದು ಮದುವೆಯಾಗಿರುತ್ತಾರೆ. ಆಕೆಯೂ ಕೂಡ ಮೃತ ಪಟ್ಟಿರುತ್ತಾಳೆ. ಕೃತಿಕ್‌ನ ತಂದೆ ಅಂದರೆ ನನ್ನ ಅಣ್ಣ ಕಳೆದ ವರ್ಷ ಮೃತಪಟ್ಟಿರುತ್ತಾರೆ. ನಂತರ ಕೃತಿಕನು ನಮ್ಮೊಂದಿಗೆ ವಾಸ ಮಾಡುತ್ತಿದ್ದನು. ಆತನು ಸ್ವಲ್ಪಮಟ್ಟಿನ ವಿದ್ಯಾಭ್ಯಾಸ ಹೊಂದಿದ್ದು ಡೈರಿಗೆ ಹಾಲು ತೆಗೆದುಕೊಂಡು ಹೋಗುತ್ತಿದ್ದ. ಕೃತಿಕ್ ನ ತಂದೆ ಮೃತ ಪಡುವ ಸಮಯದಲ್ಲಿ ಅವರ ಹೆಸರಿನಲ್ಲಿ ಬ್ಯಾಂಕಿನಲ್ಲಿ ಹಣ ಇಟ್ಟಿದ್ದು, ಕೃತಿಕ್ ನ ಹೆಸರಿಗೆ ನಾಮಿನಿ ಮಾಡಿದ್ದರು.

2. ಕೃತಿಕ್‌ನು ಆರೋಪಿಯನ್ನು ಬಿಟ್ಟರೆ ಬೇರೆ ಯಾರೊಂದಿಗೂ ಸ್ನೇಹ ಇಟ್ಟು ಕೊಂಡಿರಲಿಲ್ಲ. ಆರೋಪಿಯು ಲಕ್ಷ್ಮೀ ಬಂಗೇರಾ ಇವರ ಕುಮುಕಿ ಜಾಗದಲ್ಲಿ ಹೊಸ ಮನೆಯನ್ನು ಕಟ್ಟಲು ಪ್ರಾರಂಭಿಸಿದ್ದರು. ಅದಕ್ಕಾಗಿ ಆರೋಪಿಯು ಕೃತಿಕ್‌ನ ತಂದೆಯಿಂದ ನಾಲ್ಕು ಲಕ್ಷ ಹಣ ಪಡೆದುಕೊಂಡಿದ್ದರು. ಆರೋಪಿ ನಂತರದಲ್ಲಿ ಬ್ರಹ್ಮಾವರದಲ್ಲಿ ಮಾಂಸಾಹಾರಿ ಹೋಟೆಲ್ ನಡೆಸುತ್ತಿದ್ದನು. ಕೃತಿಕನು ಆರೋಪಿಯ ಹೋಟೆಲ್ ಗೆ ಹೋಗಿ ಬಂದು ಮಾಡುತ್ತಿದ್ದು ಅತನಿಗೆ ವ್ಯವಹಾರದಲ್ಲಿ ಸಹಾಯ ಮಾಡುತ್ತಿದ್ದನು.

3. ಚಾಸಾ13 ಶಾರದ ಈಕೆಯ ಪರಿಚಯ ಇದೆ. ಆಕೆಯು ಮುಂಡ್ಕೂರಿನ ತನ್ನ ಗಂಡನ ಮನೆಯಲ್ಲಿ ವಾಸ ಮಾಡುತ್ತಿದ್ದಳು. ಕೃತಿಕನು ಚಾಸಾ13 ಈಕೆಯ ಮನೆಗೆ ಹೋಗಿ ಬರುತ್ತಿದ್ದು ಆ ವಿಚಾರವನ್ನು ಕೃತಿಕನು ಆರೋಪಿಯೊಂದಿಗೆ ಹಂಚಿಕೊಳ್ಳುತ್ತಿದ್ದ. ಕೃತಿಕನು ಚಾಸಾ13 ಈಕೆಯ ಮನೆಗೆ ಬರುವ ಬಗ್ಗೆ ಚಾಸಾ13 ರವರ ಗಂಡನಿಗೆ ಅಸಮಾಧಾನ ಇತ್ತು. ಈ ಬಗ್ಗೆ ಚಾಸಾ13 ರವರ ಗಂಡ ನಮ್ಮ ಮನೆಗೆ ಬಂದು ಕೃತಿಕನ ಬಗ್ಗೆ ದೂರು ನೀಡಿರುತ್ತಾನೆ. ಆಗ ಕೃತಿಕನಿಗೆ ನಾವು ಚಾಸಾ13 ರವರ ಮನೆಗೆ ಹೋಗಬಾರದು ಎಂದು ಬುದ್ದಿವಾದ ಹೇಳಿರುತ್ತೇವೆ. ನಂತರದಲ್ಲಿ ಚಾಸಾ13 ಮತ್ತು ಕೃತಿಕರವರ ಸಂಪರ್ಕ ಕಡಿಮೆಯಾಯಿತು. ಕೃತಿಕನ ತಂದೆ ಮರದಿಂದ ಬಿದ್ದು ಮೃತಪಟ್ಟಿದ್ದು ತದನಂತರ ಹಣ ಮತ್ತು ಚಿನ್ನಾಭರಣಗಳನ್ನು ಹಿರಿಯಡ್ಕದ ಸಿಂಡಿಕೇಟ್ ಬ್ಯಾಂಕ್ ನಲ್ಲಿ ಕೃತಿಕನ ಹೆಸರಿನಲ್ಲಿ ಇಟ್ಟು ಅದಕ್ಕೆ ನಾಮಿನಿಯಾಗಿ ನನ್ನ ಅಕ್ಕನ ಮಗಳು ಕವಿತಾಳನ್ನು ಮಾಡಿರುತ್ತಾರೆ. ರೂಪಾಯಿ ಆರು ಲಕ್ಷ ಹಣವನ್ನು ಪೆರ್ಡೂರಿನ ವಿಜಯ ಬ್ಯಾಂಕ್ ಶಾಖೆಯಲ್ಲಿ ಕೃತಿಕನ ಹೆಸರಿನಲ್ಲಿ ಠೇವಣಿ ಇರಿಸಿರುತ್ತೇವೆ.

4. ಕೃತಿಕನ ತಂದೆ ತೀರಿಕೊಂಡ ಎರಡು ಮೂರು ತಿಂಗಳಲ್ಲಿ ಆರೋಪಿಯು ಕೃತಿಕನಲ್ಲಿ ರೂ. ಮೂರು ಲಕ್ಷ ಹಣ ಕೇಳಿದ್ದು, ಚಾಸಾ3 ಇವರಲ್ಲಿ ಕೃತಿಕನು ಈ ವಿಚಾರ ತಿಳಿಸಿದಾಗ ಹಣ ಕೊಡುವುದಾಗಿ ಚೆಕ್ ಮುಖಾಂತರ ಕೊಡು ನಗದಾಗಿ ಕೊಡುವುದು ಬೇಡ ಎಂದು ಹೇಳಿರುತ್ತಾರೆ. ಆರೋಪಿ ಚೆಕ್ ಬೇಡ ಎಂದು ಹೇಳಿದ್ದು ನಗದಾಗಿ ನೀಡುವಂತೆ ಕೇಳಿದ್ದು ಕೃತಿಕನು ರೂ. ಮೂರು ಲಕ್ಷ ನಗದನ್ನು ಆರೋಪಿಗೆ ಕೊಟ್ಟಿರುತ್ತಾನೆ. ಆರೋಪಿಯು ಮೃತ ಕೃತಿಕನೊಂದಿಗೆ ತನಗೆ ಹಣಕೊಟ್ಟ ವಿಚಾರವನ್ನು ಯಾರಿಗೂ ಹೇಳಬೇಡ ಎಂದು ಕೈ ಭಾಷೆ ಪಡೆದುಕೊಳ್ಳುವುದನ್ನು ನಾನು ನೋಡಿರುತ್ತೇನೆ. ಮುಂಬೈಯಲ್ಲಿರುವ ಸ್ಥಿರಾಸ್ತಿಯ ವರ್ಗಾವಣೆಯ ಬಗ್ಗೆ ಕೃತಿಕನನ್ನು ಮುಂಬೈಗೆ ಬರಲು ಚಾಸಾ3 ತಿಳಿಸಿದ್ದು ಆ ಸಮಯ ಕೃತಿಕ ನನ್ನ ಬಳಿ ತನ್ನಲ್ಲಿರುವ ಎಲ್ಲಾ ಹಣವನ್ನು

ಆರೋಪಿಯು ತೆಗೆದುಕೊಂಡಿರುತ್ತಾನೆ ಎಂದು ತಿಳಿಸಿರುತ್ತಾನೆ. ಈ ವಿಷಯವನ್ನು ನಾನು ಚಾಸಾ3 ರವರಿಗೆ ತಿಳಿಸಿದೆ.

5. ದಿನಾಂಕ 13-09-2022 ರಂದು ಕೃತಿಕನು ರಾತ್ರಿ 10-00 ಗಂಟೆಗೆ ನಮ್ಮ ಮನೆಗೆ ಬಂದು ಮಲಗಿದ್ದ. ಬೆಳಿಗ್ಗೆ 4-30 ರ ಸಮಯದಲ್ಲಿ ಕೃತಿಕನ ಮೊಬೈಲ್ ರಿಂಗ್ ಆಗಿದ್ದು ನಂತರ ಕೃತಿಕನು ಮೂತ್ರ ವಿಸರ್ಜನೆಗೆ ಹೋಗಲು ಟಾರ್ಚ್ ಕೊಡುವಂತೆ ಕೇಳಿದ್ದು ನಾನು ಆತನಿಗೆ ಟಾರ್ಚ್ ಕೊಟ್ಟಿರುತ್ತೇನೆ. ಮೊಬೈಲ್ ರಿಂಗ್ ಆದಾಗ ಕೃತಿಕನು ಕರೆ ಕಟ್ ಮಾಡಿರುತ್ತಾನೆ. ನಂತರ ಕೃತಿಕನು ಮನೆಯಿಂದ ಟಾರ್ಚ್ ಲೈಟ್ ನೊಂದಿಗೆ ಹೊರಗೆ ಹೋಗಿರುತ್ತಾನೆ. ಹತ್ತು ನಿಮಿಷದ ವರೆಗೆ ಆತನು ವಾಪಾಸು ಬಾರದೇ ಇರುವುದನ್ನು ನೋಡಿ ನಾನು ಹೊರಗೆ ಬಂದು ನೋಡಿದಾಗ ಕೃತಿಕ್ ಕಾಣಿಸಲಿಲ್ಲ. ಬೆಳಿಗ್ಗೆ ಸುಮಾರು 5-00 ಗಂಟೆಯ ಹೊತ್ತಿಗೆ ಬಜೆ ಕಡೆಗೆ ಒಂದು ಸ್ಕೂಟಿ ಹೋಗಿರುವುದನ್ನು ನೋಡಿರುತ್ತೇನೆ. ನಂತರ ನಾನು ಬೆಳಿಗ್ಗೆ 6-30 ರವರೆಗೆ ಕೃತಿಕ ಬಾರದೇ ಇದ್ದದನ್ನು ಗಮನಿಸಿ ಮತ್ತು ಡೈರಿಗೆ ಹಾಲು ತೆಗೆದುಕೊಂಡು ಹೋಗಬೇಕಾಗಿರುವುದರಿಂದ ಕೃತಿಕನನ್ನು ಹುಡುಕಿಕೊಂಡು ಆರೋಪಿಯ ಮನೆಗೆ ಹೋಗಿರುತ್ತೇನೆ. ಆರೋಪಿಯ ಮನೆಯವರು ಕೃತಿಕ್ ಬಂದಿಲ್ಲ ಎಂದು ತಿಳಿಸಿದರು. ನಂತರ ನಾನು ವಾಪಾಸು ಮನೆಗೆ ಬಂದಿರುತ್ತೇನೆ. ನಂತರ ಆರೋಪಿಯ ಅತ್ತೆ ನಮ್ಮ ಮನೆಯ ಹತ್ತಿರ ರಸ್ತೆಯಲ್ಲಿ ಕೃತಿಕ ಆರೋಪಿಯ ಮನೆಯ ಪಂಚಾಂಗದ ಬಳಿ ದೂಪದ ಮರದ ಹತ್ತಿರ ನಿಂತುಕೊಂಡಿದ್ದಾನೆ ಹೋಗಿ ಕರೆದುಕೊಂಡು ಬರುವಂತೆ ತಿಳಿಸಿದ್ದು ನಾನು ವಿಮಲಳನ್ನು ನನ್ನ ಜೊತೆ ಬರುವಂತೆ ಕೇಳಿದಾಗ ಆಕೆ ನಿರಾಕರಿಸಿದ್ದು ನಾನು ಷದ್ರಿ ಸ್ಥಳಕ್ಕೆ ಹೋಗಿರುತ್ತೇನೆ.

6. ನಾನು ಹೋಗಿ ನೋಡಲಾಗಿ, ದೂಪದ ಮರಕ್ಕೆ ನೇಣು ಹಾಕಿಕೊಂಡ ಸ್ಥಿತಿಯಲ್ಲಿ ಆತ ನೇತಾಡುತ್ತಿದ್ದು ನಾನು ಬೊಬ್ಬೆ ಹಾಕಿ ಮನೆಗೆ ಹೋಗಿ ವಿಚಾರ ತಿಳಿಸಿ ವಾಪಾಸು ನಾವು ಬಂದು ನೋಡುವಾಗ ಕೃತಿಕ್ ಮೃತಪಟ್ಟಿರುವುದು ಖಾತ್ರಿಯಾಯಿತು. ಮೃತ ದೇಹ ನೇತಾಡುವ ಸ್ಥಳದ ಕೆಳಗಡೆ ಒಂದು ಕಲ್ಲು ಇದ್ದು ಅದನ್ನು ತಳ್ಳಲಾಗಿತ್ತು. ನಂತರ ಸ್ಥಳೀಯರು ಮತ್ತು ನಮ್ಮ ಸಂಬಂಧಿಕರು ಸ್ಥಳಕ್ಕೆ ಬಂದು ಪೋಲಿಸರಿಗೆ ಮಾಹಿತಿ ನೀಡಿರುತ್ತೇವೆ. ಕೃತಿಕನ ಅಸಹಜ ಸಾವಿನ ಬಗ್ಗೆ ನಾನು ಪೋಲಿಸರಿಗೆ ವರದಿ ಮಾಡಿರುತ್ತೇನೆ. ಷದ್ರಿ ವರದಿಯನ್ನು ನೋಡುತ್ತಿದ್ದು ನಿಪಿ-1 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ1(ಎ) ಎಂದು ಗುರುತಿಸಲಾಯಿತು.

7. ಸ್ಥಳಕ್ಕೆ ಬಂದ ಪೋಲಿಸರು ಪರಿಶೀಲಿಸಿದಾಗ ಆತನ ಅಂಗಿಯ ಕಿಸೆಯಲ್ಲಿ ಒಂದು ಮರಣ ಪತ್ರ ಬರೆದಿತ್ತು. ಮರಣ ಪತ್ರದಲ್ಲಿ ಶಾರದಳ ವಿಚಾರದಲ್ಲಿ ಕೃತಿಕ ಬೇಸರಗೊಂಡ ಬಗ್ಗೆ ಉಲ್ಲೇಖಿಸ ಲಾಗಿತ್ತು. ಕೃತಿಕನ ಎಡಕಾಲಿನ ಬಳಿಯಲ್ಲಿ ಗಾಯಗಳು ಮತ್ತು ಕುತ್ತಿಗೆಯ ಸುತ್ತ ಒತ್ತಿದ ಗಾಯಗಳು ಇತ್ತು. ನಂತರ ಮೃತ ದೇಹವನ್ನು ಮಣಿಪಾಲದ ಕೆಎಂಸಿ ಆಸ್ಪತ್ರೆಗೆ ಮರಣೋತ್ತರ ಪರೀಕ್ಷೆಗಾಗಿ ಕಳುಹಿಸಿಕೊಟ್ಟಿರುತ್ತಾರೆ. ನಂತರ ಮೃತ ದೇಹವನ್ನು ಸಂಬಂಧಿಕರಿಗೆ ಒಪ್ಪಿಸಿರುತ್ತಾರೆ. ನಾವು ಅಂತ್ಯ ಸಂಸ್ಕಾರ ಮಾಡಿರುತ್ತೇವೆ.

8. ಕೃತಿಕನು ಆತ್ಮಹತ್ಯೆ ಮಾಡಿಕೊಳ್ಳುವ ಮನೋಭಾವ ಇಲ್ಲದೇ ಇರುವುದರಿಂದ ಈ ಬಗ್ಗೆ ನಾವು ಆತನ ಹೆಸರಿನಲ್ಲಿ ಬ್ಯಾಂಕ್ ನಲ್ಲಿ ಇರುವ ಹಣ ಮತ್ತು ಚಿನ್ನದ ಬಗ್ಗೆ ಅನುಮಾನ ಬಂದು ಬ್ಯಾಂಕ್ ಗೆ ಹೋಗಿ ವಿಚಾರಿಸುವಾಗ ಬ್ಯಾಂಕ್‌ನ ಖಾತೆಯಿಂದ ಹಣ ಪೂರ್ತಿ ಡ್ರಾ ಆಗಿರುವುದು ಗೊತ್ತಾಯಿತು. ಆರೋಪಿಯು ಕೃತಿಕನ ಬ್ಯಾಂಕ್ ಹಣವನ್ನು ಪಡೆದುಕೊಂಡಿರುವ ಬಗ್ಗೆ ಗುಮಾನಿ ಬಂದು ಕೃತಿಕನ ಮೊಬೈಲ್ ಫೋನ್ ಕಾಣೆಯಾಗಿರುವುದರಿಂದ ಮತ್ತು ಆರೋಪಿಗೆ ಕೃತಿಕನ ಜೊತೆ ಹೆಚ್ಚಿನ ಸಂಪರ್ಕ ಇರುವುದರಿಂದ ಆತನ ಸಾವಿನಲ್ಲಿ ಆರೋಪಿಯ ಕೈವಾಡ ಇದೆ ಎಂದು ಸಂಶಯ ಬಂದು ಪೋಲಿಸರಿಗೆ ಮತ್ತು ಎಸ್.ಪಿ.ಯವರಿಗೆ ನನ್ನ ಅಕ್ಕ ಚಾಸಾ2 ರವರು ದೂರು ನೀಡಿರುತ್ತಾರೆ.

**ತನಿಖಾಧಿಕಾರಿಗಳು ಪ್ರಕರಣದಲ್ಲಿ ವಶಪಡಿಸಿಕೊಂಡ ಸೊತ್ತುಗಳನ್ನು ಹಾಜರುಪಡಿಸದೇ ಇದ್ದು ಮುಂದುವರಿದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ದಿನೇಶ್ ಹೆಗ್ಡೆ)
ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.

**ಸೆಷನ್ಸ್ ಕೇಸ್ ನಂಃ 5/2023** **ಫ್ರಾ.ಸಾ.1**

**ಚಾಸಾ.1**

ದಿನಾಂಕಃ 19-10-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ :**

ದಿನಾಂಕ 23.09.2022 ರಂದು ಪೊಲೀಸರು ಮೃತನ ಕೈಬರಹ ಹೊಂದಿರುವ ಒಂದು ದಾಖಲೆ ಹಾಜರುಪಡಿಸಲು ಸೂಚಿಸಿದ ಮೇರೆಗೆ ನಾನು ಆತನ ಕೈಬರಹ ಇರುವ ಲಾಂಗ್ ನೋಟ್ ಪುಸ್ತಕವನ್ನು ಹಿರಿಯಡ್ಕ ಪೊಲೀಸ್ ಠಾಣೆಯಲ್ಲಿ ಹಾಜರುಪಡಿಸಿರುತ್ತೇನೆ. ಪೊಲೀಸರು ಅದನ್ನು ಅಮಾನತ್ತುಪಡಿಸಿಕೊಂಡಿದ್ದಾರೆ. ಆ ಸಮಯದಲ್ಲಿ ಪೊಲೀಸರು ಪಂಚನಾಮೆಯನ್ನು ಬರೆದು ನನ್ನ ಸಹಿ ಪಡೆದಿದ್ದಾರೆ. ಸಾಕ್ಷಿ ಪಂಚನಾಮೆಯಲ್ಲಿರುವ ತನ್ನ ಸಹಿ ಗುರುತಿಸಿದ್ದು, ಪಂಚನಾಮೆಯನ್ನು ನಿ.ಪಿ.7 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.7(ಎ) ಎಂದು ಗುರುತಿಸಲಾಯಿತು. ನಾನು ಹಾಜರುಪಡಿಸಿರುವ ಲಾಂಗ್ ನೋಟ್ ಪುಸ್ತಕ ನೋಡಿದರೆ ಗುರುತಿಸುತ್ತೇನೆ. ತೆರೆದ ನ್ಯಾಯಾಲಯದಲ್ಲಿ ಸೀಲ್ಡ್ ಕವರನ್ನು ತೆರೆದು ಅದರಲ್ಲಿರುವ ನೋಟ್ ಪುಸ್ತಕ ವನ್ನು ಸಾಕ್ಷಿಗೆ ತೋರಿಸಿದ್ದು, ಸಾಕ್ಷಿ ಸದರಿ ಪುಸ್ತಕವನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.8 ಎಂದು ಗುರುತಿಸಲಾಯಿತು. ಮೃತನ ಬರವಣಿಗೆಯನ್ನು ನಾನು ನೋಡಿದ್ದೇನೆ. ನಿ.ಪಿ. 8 ರಲ್ಲಿರುವ ಬರವಣಿಗೆ ಆತನದ್ದೆ ಇರುತ್ತದೆ. ನಿ.ಪಿ.7 ರ ಸಮಯದಲ್ಲಿ ಪೊಲೀಸರು ಛಾಯಾಚಿತ್ರ ತೆಗೆದಿರುತ್ತಾರೆ.

2. ದಿನಾಂಕ 21.10.2022 ರಂದು ಪೊಲೀಸರು ಹಿರಿಯಡ್ಕ ಪೊಲೀಸ್ ಠಾಣೆಗೆ ನನ್ನನ್ನು ಕರೆದಿದ್ದರು. ನನ್ನ ಜೊತೆ ನನ್ನ ಸಂಬಂಧಿಕರು ಸಹ ಬಂದಿದ್ದರು. ಆ ಸಮಯದಲ್ಲಿ ಆರೋಪಿ ಪೊಲೀಸ್ ಠಾಣೆಯಲ್ಲಿದ್ದರು. ಪೊಲೀಸರು ನನ್ನ ಸಮಕ್ಷಮ ಆರೋಪಿಯನ್ನು ವಿಚಾರಿಸಿರುತ್ತಾರೆ. ಆರೋಪಿ ಪೊಲೀಸರ ಸಮಕ್ಷಮದಲ್ಲಿ ತಾನು ಮೃತನ ಕಡೆಯಿಂದ ಹಣ ತೆಗೆದುಕೊಂಡ ವಿಚಾರವನ್ನು ಒಪ್ಪಿಕೊಂಡಿರುತ್ತಾನೆ. ಹಣವನ್ನು ವಾಪಾಸ್ಸು ಕೊಡಲು ಆಗದೆ ಇದ್ದ ಕಾರಣಕ್ಕೆ ನಾನು ಆತನನ್ನು ಕೊಲೆ ಮಾಡಿದ್ದೇನೆ ಎಂದು ತಿಳಿಸಿದನು.

3. ಮೃತ ಮತ್ತು ಚಾ.ಸಾ. 13 ರವರ ನಡುವೆ ಇರುವ ಅನೈತಿಕ ಸಂಬಂಧದ ವಿಚಾರವನ್ನು ಮೃತ ತನಗೆ ತಿಳಿಸಿದ ಕಾರಣ ನಾನು ಮೃತನಿಗೆ ಶಾರದಾಳ ಹೆಸರಿನಲ್ಲಿ ಪತ್ರ ಬರೆಯುವಂತೆ ಪ್ರಚೋದಿಸಿ ಮತ್ತು ನೀನು ನನ್ನೊಂದಿಗೆ ಮಾತನಾಡದಿದ್ದಲ್ಲಿ ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದು ಚಾ.ಸಾ.13 ರವರಿಗೆ ತಿಳಿಸಬೇಕು ಮತ್ತು ಆ ರೀತಿ ನಟನೆ ಮಾಡುವಂತೆ ಆತನಿಗೆ ತಿಳಿಸಿದ್ದೇನೆ ಎಂದು ಹೇಳಿದನು ಮತ್ತು ಆತ್ಮಹತ್ಯೆಮಾಡಿಕೊಳ್ಳುವ ವೀಡಿಯೋವನ್ನು ಶಾರದಾಳಿಗೆ ತೋರಿಸಬೇಕೆಂದು ತಿಳಿಸಿದ್ದು, ಅದೇ ರೀತಿ ಮೃತನಿಗೆ ಮರಕ್ಕೆ ಹಗ್ಗ ಕಟ್ಟಿಕೊಂಡು ಕೆಳಗಡೆ ಒಂದು ಕಲ್ಲನ್ನು ಇಟ್ಟುಕೊಂಡು ನಿಲ್ಲುವಂತೆ ಹೇಳಿ ನಾನು ವೀಡಿಯೋ ಮಾಡುವುದಾಗಿ ಹೇಳಿ, ಆಗ ಮೃತನ ನಟನೆ ಮಾಡುವ ಸಂದರ್ಭದಲ್ಲಿ ನಾನು ಕಲ್ಲನ್ನು ಜಾರಿಸಿ ಅದರಿಂದ ಆತನ ಕುತ್ತಿಗೆಗೆ

ನೇಣು ಬಿಗಿದು ಮೃತಪಟ್ಟಿದ್ದಾನೆ ಎಂದು ತಿಳಿಸಿದನು. ಅಲ್ಲದೇ ಮೃತನಿಗೆ ಲಾಕರ್ ನಲ್ಲಿರುವ ಚಿನ್ನ ತೆಗೆದುಕೊಂಡು ಬಾ ಸದ್ರಿ ಚಿನ್ನವನ್ನು ಹಾಕಿಕೊಂಡು ಛಾಯಾಚಿತ್ರ ತೆಗೆದು ನಿನಗೆ ಮದುವೆ ಮಾಡುವ ಹುಡುಗಿಯ ಕಡೆಯವರಿಗೆ ಕಳುಹಿಸುತ್ತೇನೆ ಎಂದು ಹೇಳಿದ್ದೇನೆ ಎಂದು ತಿಳಿಸಿದನು. ಈ ಎಲ್ಲಾ ವಿಷಯವನ್ನು ನಾನು ಮೃತನೊಂದಿಗೆ ಮೊಬೈಲ್ ಸಂಭಾಷಣೆ ಮಾಡಿದ್ದೇನೆ ಎಂದು ತಿಳಿಸಿದನು.

4. ನಂತರ ಪೊಲೀಸರು ಬ್ರಹ್ಮಾವರ ವೃತ್ತ ನಿರೀಕ್ಷಕರ ಕಛೇರಿಗೆ ನನ್ನನು ಕರೆಸಿದ್ದರು. ಸದ್ರಿ ಕಛೇರಿಯಲ್ಲಿ ಆರೋಪಿಯು ಇದ್ದನು. ಆ ಸಮಯದಲ್ಲಿ ಪೊಲೀಸರು ಆರೋಪಿಯ ಮೊಬೈಲ್‌ನಲ್ಲಿ ದಾಖಲಾದ ಸಂಭಾಷಣೆಯನ್ನು ನನಗೆ ಕೇಳಿಸಿದ್ದು, ಸದ್ರಿ ಸಂಭಾಷಣೆ ಆರೋಪಿ ಮತ್ತು ಮೃತನ ನಡುವೆ ಆದ ಸಂಭಾಷಣೆ ಆಗಿತ್ತು. ನನಗೆ ಆರೋಪಿ ಮತ್ತು ಮೃತನ ಧ್ವನಿಯ ಪರಿಚಯ ಇದ್ದ ಕಾರಣ ಅದನ್ನು ನಾನು ಗುರುತಿಸಿದ್ದೆನು. ಸದ್ರಿ ಸಂಭಾಷಣೆಯನ್ನು ಪೊಲೀಸರು ಬರವಣೆಗೆ ಮಾಡಿರುತ್ತಾರೆ. ಪೊಲೀಸರು ಆರೋಪಿಯ ಮಾದರಿ ಧ್ವನಿಯನ್ನು ಸಂಗ್ರಹ ಮಾಡಿದರು. ಸದ್ರಿ ಸಂಭಾಷಣೆಯನ್ನು ಆರೋಪಿಯು ಹಿರಿಯಡ್ಕ ಪೊಲೀಸ್ ಠಾಣೆಯಲ್ಲಿ ನೀಡಿದ ಹೇಳಿಕೆಯ ಸಂಭಾಷಣೆ ಆಗಿದೆ. ಪೊಲೀಸರು ಕಛೇರಿಯಲ್ಲಿ ಪಂಚನಾಮೆಯನ್ನು ಬರೆದಿದ್ದು, ಅದಕ್ಕೆ ನಾನು ಸಹಿ ಹಾಕಿದ್ದೇನೆ. ಸಾಕ್ಷಿಯು ದಿನಾಂಕ 24.10.2022 ರಂದು ಪಂಚನಾಮೆಯಲ್ಲಿರುವ ತನ್ನ ಸಹಿ ಗುರುತಿಸಿದ್ದು, ಪಂಚನಾಮೆಯನ್ನು ನಿ.ಪಿ 9 ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ 9(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಪೊಲೀಸರು ಛಾಯಾಚಿತ್ರವನ್ನು ತೆಗೆದಿರುತ್ತಾರೆ. ಸಾಕ್ಷಿಯು ಛಾಯಾಚಿತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.10 ಎಂದು ಗುರುತಿಸಲಾಯಿತು.

5. ಆರೋಪಿಯ ಧ್ವನಿಯನ್ನು ನನ್ನ ಸಮಕ್ಷಮ ಸಿ.ಡಿಯಲ್ಲಿ ಸಂಗ್ರಹಿಸಿರುತ್ತಾರೆ. ಸದ್ರಿ ಸಿ.ಡಿಯನ್ನು ನೋಡಿದರೆ ಗುರುತಿಸುತ್ತೇನೆ. ಸೀಲ್ಡ್ ಕವರ್ ನ್ನು ತೆರೆದ ನ್ಯಾಯಾಲಯದಲ್ಲಿ ತೆಗೆದು ನೋಡಲಾಗಿ, ಅದರಲ್ಲಿರುವ ಸಿ.ಡಿ ಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು M.O-1 ಎಂದು ಗುರುತಿಸಲಾಯಿತು.

6. ಆರೋಪಿ ಮತ್ತು ಮೃತನ ನಡುವೆ ಆದ ಸಂಭಾಷಣೆಯ ಕ್ಲಿಪಿಂಗ್ ನ್ನು ಪೊಲೀಸರು ಸಿ.ಡಿಗೆ ಅಳವಡಿಸಿರುತ್ತಾರೆ. ಸದ್ರಿ ಸಿ.ಡಿಯನ್ನು ನೋಡಿದರೆ ಗುರುತಿಸುತ್ತೇನೆ. ಸೀಲ್ಡ್ ಕವರ್ ನ್ನು ತೆರೆದ ನ್ಯಾಯಾಲಯದಲ್ಲಿ ತೆಗೆದು ನೋಡಲಾಗಿ, ಅದರಲ್ಲಿರುವ ಸಿ.ಡಿ ಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು M.O-2 ಎಂದು ಗುರುತಿಸಲಾಯಿತು.

7. ಮೃತನು ನನ್ನ ಅಣ್ಣನ ಮಗನಾಗಿದ್ದು, ಆರೋಪಿಯು ನನ್ನ ಪಕ್ಕದ ಮನೆ ವಾಸಿಯಾಗಿದ್ದು, ಅವರಿಬ್ಬರ ಜೊತೆ ನಾನು ಮೊಬೈಲ್ ನಲ್ಲಿ ಮಾತನಾಡಿರುವ ಕಾರಣ ಮೊಬೈಲ್‌ನಲ್ಲಿ ಸಂಗ್ರಹಿಸಿರುವ ಅವರ ಧ್ವನಿಗಳನ್ನು ಗುರುತಿಸಬಲ್ಲೆ. ಸದ್ರಿ ಸಂಭಾಷಣೆಗಳನ್ನು ಈ ದಿವಸ ನ್ಯಾಯಾಲಯದಲ್ಲಿ ನಾನು ಗುರುತಿಸಬಲ್ಲೆ. M.O-2 ರಲ್ಲಿರುವ ಸಂಭಾಷಣೆಗಳನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಗೆ ಕೇಳಿಸಲಾಗಿ ಸಾಕ್ಷಿಯು ಅವು ಆರೋಪಿ ಮತ್ತು ಮೃತನ ನಡುವೆಯಾಗಿರುವ ಸಂಭಾಷಣೆಗಳು ಎಂದು ಒಪ್ಪಿರುತ್ತಾರೆ. ಆರೋಪಿತನ ಧ್ವನಿಯನ್ನು ಗುರುತಿಸಿದ ಬಗ್ಗೆ ಆರೋಪಿಯ ತಕರಾರಿಗೆ ಮತ್ತು ಪುರಾವೆಗೆ ಒಳಪಟ್ಟು ಸಾಕ್ಷಿಯ ವಿಚಾರಣೆಯನ್ನು ದಾಖಲಿಸಿಕೊಳ್ಳಲಾಯಿತು.

8. ಸುಮಾರು 2 ತಿಂಗಳ ನಂತರ ನಾನು ಠಾಣೆಗೆ ಹಾಜರಾಗಿದ್ದು, ಮೃತ ಕೃತಿಕ್ ಮನೆಯಿಂದ ಹೋಗುವಾಗ ತೆಗೆದುಕೊಂಡು ಹೋದ ಟಾರ್ಚ್ ಲೈಟ್ ಘಟನಾ ಸ್ಥಳದಲ್ಲಿ ನನಗೆ ಅದೇ ದಿನ ಸಿಕ್ಕಿದ್ದು ಸದ್ರಿ

ಟಾರ್ಚ್ ನ್ನು ನಾನು ಪೊಲೀಸರ ಸಮಕ್ಷಮ ಹಾಜರುಪಡಿಸಿದ್ದು, ಅದನ್ನು ಪೊಲೀಸರು ಪಂಚರ ಸಮಕ್ಷಮ ಪಂಚನಾಮೆಯನ್ನು ಬರೆದು ಅಮಾನತ್ತುಪಡಿಸಿಕೊಂಡಿದ್ದಾರೆ. ಸದ್ರಿ ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ. ಪಂಚನಾಮೆಯನ್ನು ನಿ.ಪಿ 11 ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ 11(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಪೊಲೀಸರು ಛಾಯಾಚಿತ್ರಗಳನ್ನು ತೆಗೆದಿರುತ್ತಾರೆ. ಸಾಕ್ಷಿಯು ಎರಡು ಛಾಯಚಿತ್ರಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿ.ಪಿ.12 ಎಂದು ಗುರುತಿಸಲಾಯಿತು. ಸದ್ರಿ ಟಾರ್ಚ್ ಲೈಟ್ ನೋಡಿದರೆ ಗುರುತಿಸುತ್ತೇನೆ. ಸೀಲ್ಡ್ ಕವರ್ ನ್ನು ತೆರೆದ ನ್ಯಾಯಾಲಯದಲ್ಲಿ ತೆಗೆದು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ಟಾರ್ಚ್ ಲೈಟ್ ನ್ನು ಗುರುತಿಸಿದ್ದು, ಅದನ್ನು M.O-3 ಎಂದು ಗುರುತಿಸಲಾಯಿತು.

**ಪಾಟಿ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ.ಇ.ಬಿ.ಆರ್ ರವರಿಂದ**

ಸಮಯ ಕೋರಿದ್ದು ಪಾಟೀ ಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.